**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**
**ಸಿ.ಸಿ. ನಂ. 412–12**

| | | |
|---|---|---|
| ಹೆಸರು | ರಾಜಣ್ಣ. ಬಿ | ಪ್ರಾ.ಸಾ.2 |
| ತಂದೆ ಹೆಸರು | ಬೈರೇಗೌಡ | ಚಾ.ಸಾ.15 |
| ವಯಸ್ಸು | 39 ವರ್ಷ | |
| ಕೆಲಸ | ಪೋಲೀಸ್ ಇನ್ಸ್‌ಪೆಕ್ಟರ್, ಹೈ ಕೋರ್ಟ್ ವಿಜಿಲೆನ್ಸ್ | ಸಾ.ಪ್ರ.ವ.ಬೋ |
| ಹಾಲಿ ವಾಸ | ಬೆಂಗಳೂರು | ದಿ:–13–11–2018 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :–**

ನಾನು ದಿ:01.07.2011 ರಿಂದ ಸೆಪ್ಟೆಂಬರ್ 2012 ರವರೆಗೆ ನಂದಗುಡಿ ಪೋ.ಠಾಣೆಯಲ್ಲಿ ಪಿಎಸ್‌ಐ ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿ:18.02.2012 ರಂದು ಸಂಜೆ 5.30ಕ್ಕೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ1ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರು ಪಡೆದುಕೊಂಡು, ಪ್ರಕರಣ ದಾಖಲಿಸಿಕೊಂಡು, ಪ್ರವವ.ಯನ್ನು ನ್ಯಾಯಾಲಯಕ್ಕೆ ಹಾಗೂ ಪ್ರತಿಗಳನ್ನು ಮೇಲಧಿಕಾರಿಗಳಿಗೆ ರವಾನಿಸಿಕೊಂಡಿರುತ್ತೇನೆ.

ಅದೇ ದಿನ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಪಿರ್ಯಾದಿ ತೋರಿಸಿದ ಸ್ಥಳದಲ್ಲಿ ಸಂಜೆ 6.30–7.15ರವರೆಗೆ ಪಂಚರಾದ ಚಾಸಾ.2 ಮತ್ತು 3 ರವರ ಸಮಕ್ಷಮ ಅಮಾನತ್ತು ಪಂಚನಾಮೆಯನ್ನು ಜರುಗಿಸಿರುತ್ತೇನೆ. ಆ ಸಮಯದಲ್ಲಿ ಅಪಘಾತ ಪಡಿಸಿದ ಟಾಟಾ ಕಾರ್ ನಂ:ಕೆಎ–03–ಎಂಬಿ–2076ನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅದೇ ದಿನ ಕೃತ್ಯ ಸ್ಥಳದ ಕಚ್ಚಾ ನಕಾಶೆಯನ್ನು ಕೂಡಾ ತಯಾರಿಸಿರುತ್ತೇನೆ. ಮಹಜರ್‌ಗೆ ಚಾಸಾ.1 ರಿಂದ 3 ರವರ ಸಹಿಗಳನ್ನು ಪಡೆದಿರುತ್ತೇನೆ.

ಅಮಾನತ್ತು ಪಡಿಸಿಕೊಂಡ ಕಾರನ್ನು ಮಾಲುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ. 16 ರವರಿಗೆ ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿ ನಿಪಿ.1ನ್ನು ನೋಡಿ ಗುರ್ತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ1.ಬಿ ಎಂದು, ಪ್ರವವ.ಯನ್ನು ನಿಪಿ3 ಎಂದು, ಸಾಕ್ಷಿಯ ಸಹಿಯನ್ನು ನಿಪಿ3ಎ ಎಂದು, ಸಾಕ್ಷಿ ನಿಪಿ2ನ್ನು ನೋಡಿ ಗುರ್ತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2ಬಿ ಎಂದು ಗುರ್ತಿಸಲಾಯಿತು. ಸಾಕ್ಷಿ ಸ್ಕೆಚ್‌ನ್ನು ನೋಡಿ ಗುರ್ತಿಸಿದ್ದು, ಅದನ್ನು ನಿಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿಪಿ4ಎ ಎಂದು ಗುರ್ತಿಸಲಾಯಿತು.

**<u>ಪಾಟೀ ಸವಾಲು: ಆರೋಪಿಗಳ ಪರ ವಕೀಲರಿಂದ:–</u>**

ಚಾಸಾ.1ರವರು ದೂರನ್ನು ಬರೆದುಕೊಂಡೇ ಬಂದಿದ್ದರು. ನಮ್ಮ ಠಾಣೆಯಿಂದ ಘಟನಾ ಸ್ಥಳ ಸುಮಾರು 12 ಕಿಮೀ ಅಂತರದಲ್ಲಿದೆ. ನಾನು ಪ್ರ.ವ.ವ.ಯನ್ನು ತಯಾರಿಸಿ ಘಟನಾ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಪಂಚರಿಗೆ ನಾನು ಯಾವುದೇ ನೋಟೀಸ್ ನೀಡಿರಲಿಲ್ಲ. ಚಾಸಾ.2 ಮತ್ತು 3 ಸ್ಥಳದಲ್ಲಿಯೇ ಇದ್ದರು. ನಿಪಿ.2ನ್ನು ನಮ್ಮ ಸಿಬ್ಬಂದಿ ಬರೆದಿದ್ದು, ಅವರ ಹೆಸರನ್ನು ಹೇಳಲು ನೆನಪಿಲ್ಲ. ನಿಪಿ2ರಲ್ಲಿ ಅದರ ಬರಹಗಾರರ ಸಹಿ ಪಡೆದಿಲ್ಲ ಎಂದರೆ ಸರಿ. ನಾನು ಹೇಳಿದಂತೆ ಸಥ ಸ್ಥಳದಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ, ಠಾಣೆಯಲ್ಲೇ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ.4ನ್ನು ತಯಾರಿಸಿದವರು ಯಾರು ಎಂದು ಅದರಲ್ಲಿ ನಮೂದು ಇಲ್ಲ ಎಂದರೆ ಸರಿ. ಅದರಲ್ಲಿ ಅದನ್ನು ತಯಾರಿಸಿದವರ ಸಹಿ ಕೂಡಇಲ್ಲ ಎಂದರೆ ಸರಿ. ಮೃತರಿಗೆ ಪರಿಹಾರಕ್ಕೆ ಸಹಾವಾಗಲೆಂದು ಒಂದು ಸುಳ್ಳು ದೂರು ಪಡೆದು, ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಮಹಜರ್ ಕ್ರಮ ಜರುಗಿಸದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ1ರಲ್ಲಿ ಮೃತ ಯಲ್ಲಮ್ಮ ರಸ್ತೆ ದಾಟುತ್ತಿದ್ದಾಗ ಅಪಘಾತವಾದ ಕುರಿತು ನಮೂದು ಇರುತ್ತದೆ ಎಂದರೆ ಸರಿ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**